## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ-IIರಡಿ ಅನುಮೋದನೆ ನೀಡಿದ ಕಾಮಗಾರಿಗಳಿಗೆ 2016-17ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಪಾಲಿನ ಎರಡನೇ ಕಂತು ಮತ್ತು ರಾಜ್ಯದ ಪಾಲಿನ ಅನುದಾನವನ್ನು KRRDA ಸಂಸ್ಥೆಗೆ ಬಿಡುಗಡೆಗೊಳಿಸುವ ಕುರಿತು.

ಓದಲಾಗಿದೆ:
1. ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ರವರ ಪತ್ರ ಸಂಖ್ಯೆ:ಕೆಆರ್‌ಆರ್‌ಡಿಎ//2016-17/7429 ದಿನಾಂಕ 09.03.2017.
2. ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರ ಸಂಖ್ಯೆ:P-17017/2/2015-RC(FMS No.340759 ದಿನಾಂಕ 10.12.2015.
3. ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರ ಸಂಖ್ಯೆ:J-12022/1/2012-RC(FMS No.341866) ದಿನಾಂಕ 09.03.2017.
4. ಆರ್ಥಿಕ ಇಲಾಖೆಯ Credit Confirmation Slip No.FD/44/BGL/2016, ದಿ:17-03-2017.

**ಪ್ರಸ್ತಾವನೆ:**

ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ-IIರಡಿ ಅನುಮೋದನೆ ನೀಡಿದ ಕಾಮಗಾರಿಗಳಿಗೆ 2016-17ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಪಾಲಿನ 2ನೇ ಕಂತಿನ ಭಾಗ ಮತ್ತು ರಾಜ್ಯದ ಪಾಲಿನ ಅನುದಾನವನ್ನು ಬಿಡುಗಡೆಗೊಳಿಸುವಂತೆ ಮೇಲೆ ಓದಲಾದ-1ರಲ್ಲಿ KRRDA ಸಂಸ್ಥೆಯು ಕೋರಿರುತ್ತದೆ.

ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ-IIರಡಿಯಲ್ಲಿ ರೂ.1044.59ಕೋಟಿ (ಪರಿಷ್ಕೃತ ರೂ.1044.09 ಕೋಟಿ) ಮೊತ್ತದಲ್ಲಿ ಗ್ರಾಮೀಣ ರಸ್ತೆಗಳನ್ನು ಹಾಗೂ ಸೇತುವೆಗಳನ್ನು ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರವು 2013-14ನೇ ಸಾಲಿನಲ್ಲಿ ನೀಡಿದ ಮಂಜೂರಾತಿಯಂತೆ ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಇಲಾಖೆಯಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಅನುಮೋದಿತ ಮೊತ್ತದ ಪೈಕಿ ಶೇ.75:25ರ ಅನುಪಾತದಲ್ಲಿ ಕೇಂದ್ರ ಸರ್ಕಾರದ ಪಾಲು ರೂ.815.50ಕೋಟಿ ಹಾಗೂ ರಾಜ್ಯ ಸರ್ಕಾರದ ಪಾಲು ರೂ.229.09ಕೋಟಿಗಳೆಂದು ನಿಗಧಿಪಡಿಸಿದ ಈ ಮೊತ್ತವನ್ನು ದಿನಾಂಕ:1-4-2015ರಿಂದ ಅನ್ವಯವಾಗುವಂತೆ ಶೇ.60:40ರ ಅನುಪಾತದಲ್ಲಿ ಕೇಂದ್ರ/ರಾಜ್ಯವು ಭರಿಸುವಂತೆ ಮೇಲೆ ಓದಲಾದ-2ರಲ್ಲಿ ಕೇಂದ್ರ ಸರ್ಕಾರವು ಪರಿಷ್ಕೃತಗೊಳಿಸಿರುತ್ತದೆ.

ಪ್ರಸ್ತುತ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಕಾಮಗಾರಿಗಳಿಗೆ ಲೆಕ್ಕಶೀರ್ಷಿಕೆ-5054-03-337-0-71-172/422/ 423ರಡಿ ಅನುಕ್ರಮವಾಗಿ ರೂ.332.50 ಕೋಟಿ, ರೂ.370.92 ಕೋಟಿ ಮತ್ತು ರೂ.168.28 ಕೋಟಿ ಸೇರಿ ಒಟ್ಟಾರೆ ರೂ.871.70 ಕೋಟಿಗಳನ್ನು ಒದಗಿಸಲಾಗಿರುತ್ತದೆ.

ಮುಂದುವರೆದು ಕೇಂದ್ರ ಸರ್ಕಾರವು ಪ್ರಸ್ತುತ 2016-17ನೇ ಸಾಲಿಗೆ ಪಿಎಂಜಿಎಸ್‌ವೈ-II ಕಾಮಗಾರಿಗಳಿಗೆ ರೂ.59.995 ಕೋಟಿಗಳನ್ನು ಮೇಲೆ ಓದಲಾದ-3 ರಲ್ಲಿ ರಾಜ್ಯಕ್ಕೆ ಬಿಡುಗಡೆ ಮಾಡಿದ ಈ ಅನುದಾನಕ್ಕೆ ಆರ್ಥಿಕ ಇಲಾಖೆಯು ಮೇಲೆ ಓದಲಾದ-4ರಂತೆ

No.FD/44/BGL/2016, ದಿ:17-03-2017 ರಲ್ಲಿ Credit Confirmation Slip ನ್ನು ನೀಡಿದ್ದು, ಕೇಂದ್ರದ ಪಾಲಿನ ಅನುದಾನ ವಿಳಂಬವಿಲ್ಲದೆ ತುರ್ತಾಗಿ ಬಿಡುಗಡೆ ಮಾಡುವುದರೊಂದಿಗೆ ರಾಜ್ಯಕ್ಕೆ ಬಿಡುಗಡೆ ಮಾಡಿದ ಮೊತ್ತಕ್ಕೆ ಅನುಪಾತದಂತೆ ರಾಜ್ಯದ ಪಾಲಿನ ಅನುದಾನ ರೂ.39.996 ಕೋಟಿ ಸೇರಿ ಒಟ್ಟಾರೆ ರೂ.99.991 ಕೋಟಿಗಳನ್ನು ಬಿಡುಗಡೆ ಮಾಡುವುದು ಅಗತ್ಯವಿರುತ್ತದೆ.

ಪ್ರಸ್ತುತ 2016-17ನೇ ಸಾಲಿಗೆ ಆರ್ಥಿಕ ಇಲಾಖೆಯಿಂದ ಹೊರಡಿಸಿರುವ ಆದೇಶ ಸಂಖ್ಯೆ: FD/3/TFP/2016, ದಿ:2-4-2016ರಲ್ಲಿ ಹಾಗೂ ಆದೇಶ ಸಂಖ್ಯೆ: 06/ TFP/2016, ದಿ:27-12-2016 ರಲ್ಲಿ ನೀಡಿರುವ ಆರ್ಥಿಕ ಪ್ರತ್ಯಾಯೋಜನೆಯಂತೆ ಕೇಂದ್ರ ಪುರಸ್ಕೃತ ಯೋಜನೆಯಾದ ಪಿಎಂಜಿಎಸ್‌ವೈ-II ಕಾಮಗಾರಿಗಳಿಗೆ ಅನುದಾನ ಬಿಡುಗಡೆಗೊಳಿಸಲು ಇಲಾಖೆಗೆ ಅವಕಾಶ ನೀಡಲಾಗಿರುತ್ತದೆ.

ಅದರಂತೆ ಕೇಂದ್ರ ಮತ್ತು ರಾಜ್ಯದ ಪಾಲಿನ ಅನುದಾನ ಒಟ್ಟು ರೂ.99.991 ಕೋಟಿಗಳನ್ನು 2016-17ನೇ ಸಾಲಿನ ಲೆಕ್ಕಶೀರ್ಷಿಕೆ-5054-03-337-0-71-172/422/423 ರಡಿಯ ಅನುದಾನದಲ್ಲಿ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಗೆ ಬಿಡುಗಡೆ ಮಾಡಲು ಸರ್ಕಾರವು ತೀರ್ಮಾನಿಸಿರುತ್ತದೆ.

ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:59/6:ಆರ್‌ಆರ್‌ಸಿ:2016, ಬೆಂಗಳೂರು, ದಿನಾಂಕ: 17-03-2017.**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಸರ್ಕಾರವು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ-IIರ ಕಾಮಗಾರಿಗಳಿಗಾಗಿ ಲೆಕ್ಕಶೀರ್ಷಿಕೆ-5054-03-337-0-71-172/422/423(ಯೋಜನೆ) ಅಡಿ ಈ ಕೆಳಕಂಡ Objective Code ವಾರು ಕೇಂದ್ರ ಸರ್ಕಾರದ ಪಾಲಿನ ಅನುದಾನ ರೂ.59.995 ಕೋಟಿ ಹಾಗೂ ಅನ್ವಯಿತ ರಾಜ್ಯದ ಪಾಲು ರೂ.39.996 ಕೋಟಿ ಸೇರಿ ಒಟ್ಟಾರೆ ರೂ.99.991 ಕೋಟಿಗಳನ್ನು (ರೂಪಾಯಿಗಳು ತೊಂಭತೊಂಭತ್ತು ಕೋಟಿ ತೊಂಭತೊಂಭತ್ತು ಲಕ್ಷದ ಹತ್ತು ಸಾವಿರಗಳು ಮಾತ್ರ) ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಇವರಿಗೆ ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

**(ರೂ.ಕೋಟಿಗಳಲ್ಲಿ)**

| ಲೆಕ್ಕ ಶೀರ್ಷಿಕೆ | ಕೇಂದ್ರದ ಪಾಲು | ಪ್ರಸ್ತುತ ಕೇಂದ್ರದ ಅನುದಾನಕ್ಕೆ ರಾಜ್ಯದ ಪಾಲು | ಒಟ್ಟು |
|---|---|---|---|
| 5054-03-337-0-71-172-ರಸ್ತೆಗಳು | 15.580 | 0.000 | 15.580 |
| 5054-03-337-0-71-422-ಪ.ಜಾ.ಉ.ಯೋ | 32.405 | 26.996 | 59.401 |
| 5054-03-337-0-71-423-ಗಿ.ಉ.ಯೋ | 12.010 | 13.000 | 25.010 |
| **ಒಟ್ಟು** | **59.995** | **39.996** | **99.991** |

ಈ ಅನುದಾನವನ್ನು ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯಲ್ಲಿ ಪ್ರತ್ಯೇಕವಾದ ಪೋಗ್ರಾಂ ಖಾತೆಯಲ್ಲಿರಿಸಿಕೊಂಡು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಚಾಲನಾ ಕೈಪಿಡಿ ನಿಯಮಗಳಂತೆ ನಿರ್ವಹಿಸುವುದು ಮತ್ತು ಅನುದಾನವನ್ನು ಸಂಬಂಧಿಸಿದ ಪಿಎಂಜಿಎಸ್‌ವೈ ಯೋಜನಾ ವಿಭಾಗಗಳು ಈ ಕೆಳಕಂಡ ಷರತ್ತಿಗೊಳಪಟ್ಟು ವಿನಿಯೋಗಿಸತಕ್ಕದ್ದು.

**ಷರತ್ತುಗಳು:**

1. ಸದರಿ ಅನುದಾನವನ್ನು ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ ರವರು ಗ್ರಾಂಟ್-ಇನ್-ಏಡ್ ಬಿಲ್ಲು ಸಲ್ಲಿಸಿ, ನಿರ್ದೇಶಕರು, ಗ್ರಾಮೀಣ ಮೂಲಭೂತ ಸೌಲಭ್ಯಗಳು ರವರ ಮೇಲು ರುಜು ಪಡೆದು ಖಜಾನೆಯಿಂದ ಚೆಕ್ ಪಡೆಯುವುದು.

2. ಈ ಅನುದಾನವನ್ನು ಪಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ-IIರ ಕಾಮಗಾರಿಗಳಿಗಾಗಿ ಕೇಂದ್ರ ಸರ್ಕಾರದ ಪಾಲಿನ ಅನುದಾನವಾಗಿ ವಿನಿಯೋಗಿಸತಕ್ಕದ್ದು.

3. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ ರವರು ಸದರಿ ಅನುದಾನಕ್ಕೆ ಹಣ ಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

4. ಕೇಂದ್ರ ಸರ್ಕಾರದ ಪತ್ರ ದಿನಾಂಕ:16-4-2014ರಂತೆ ಈ ಕೆಳಕಂಡ ನಿಬಂಧನೆಗಳನ್ನು KRRDA ಸಂಸ್ಥೆ ಪಾಲಿಸತಕ್ಕದ್ದು.

1) The funds released by the State Government shall be kept in a separate Savings Bank Account No.0436210000018 in Syndicate Bank, J-652, 1st Floor, Near Navrang Junction, Dr. Rajkumar Road, Rajajinagar 2nd Stage, Bangalore-560010(IFSC Code No.SYNB0000436) Karnataka.

2) It shall be ensured by the KRRDA that the programme implementing units in the districts have access to the funds and the funds held in the specified account are allowed to be utilised only by the Executing Agency/Agencies for the purpose of approved works under the PMGSY-||. The COO, KRRDA shall communicate to the bank the names of the authorised signatories, who will be issuing cheques on the agencies said bank account for the purpose of this sanction.

3) The COO shall issue standing instructions to the bank regarding the names of authorised payees and their designated account details and the amount admissible to each payee and also specify limits on monthly payments as per the agreed work programme for the respective package.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: .FD/44/BGL/2016, ದಿ:17-03-2017 ರ ಆರ್ಥಿಕ ಪ್ರತ್ಯಾಯೋಜನೆಯನ್ವಯ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಕಂಡಿಕೆ ಸಂಖ್ಯೆ:ಗ್ರಾಅಪ:106:ಪಿಬಿಎಸ್:2017, ದಿ:10.03.2017 ರಲ್ಲಿ ನೀಡಿದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

17/3/17

(ವೈ.ಮಹಾಂಕಾಳಪ್ಪ)
ಉಪ ನಿರ್ದೇಶಕರು
ಸುವರ್ಣ ಗ್ರಾಮೋದಯ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಪ್ರತಿಯನ್ನು:**

1. ಮಹಾಲೇಖಪಾಲಕರು (ಲೆಕ್ಕಪತ್ರ), (ಆಡಿಟ್-1) ಮತ್ತು (ಆಡಿಟ್-2), ಕರ್ನಾಟಕ, ಬೆಂಗಳೂರು.
2. ಮಾನ್ಯ ಗ್ರಾ.ಅ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.

4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (PMU)(IF), 5ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು.
6. Sri. P. Manoj Kumar, Director (RC), Ministry of Rural Development, Room No.278, Krishi Bhavan, New Delhi-110001.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
9. ವಿಶೇಷಾಧಿಕಾರಿಗಳು (ಜಿ.ಪಂ) ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
10. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
11. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
12. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
13. ಉಪ ನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ಟ್ರೆಜರಿ ಡಿಪಾರ್ಟ್‌ಮೆಂಟ್, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
14. ಅಧೀನ ಕಾರ್ಯದರ್ಶಿಗಳು(ವೆಚ್ಚ-6), ಜಿ.ಪಂ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
15. ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಗ್ರಾಮೀಣಾಭಿವೃದ್ಧಿ ಭವನ, 3ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು-9.
16. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, 2ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು-9.
17. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
18. ಎಲ್ಲಾ ಪಂಚಾಯತ್ ರಾಜ್ ಇಂಜಿನಿರಿಂಗ್ ವೃತ್ತಗಳ ಅಧೀಕ್ಷಕ ಇಂಜಿನಿಯರುಗಳಿಗೆ.
19. ಎಲ್ಲಾ ಪಿ.ಎಂ.ಜಿ.ಎಸ್.ವೈ ಯೋಜನಾ ವಿಭಾಗಗಳ ಕಾರ್ಯಪಾಲಕ ಇಂಜಿನಿಯರುಗಳಿಗೆ
20. ಎಲ್ಲಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಇಂಜಿನಿಯರುಗಳಿಗೆ.
21. ನಿರ್ದೇಶಕರು, ಇ-ಆಡಳಿತ ರವರಿಗೆ ಕಳುಹಿಸುತ್ತಾ ವೆಬ್‌ಸೈಟ್‌ಗೆ ಅಳವಡಿಸಲು ಕೋರಿದೆ.
22. ರಕ್ಷಾ ಕಡತ / ಹೆಚ್ಚುವರಿ ಪ್ರತಿ.